19

# ಯೇಸುವಿನ ಸೇವೆಯ ಕೊನೆಯ ವಾರ

**1. ಬೇಥಾನ್ಯದಲ್ಲಿ ಅಭಿಷೇಕ** (ಮತ್ತಾಯ 26:6-13; ಮಾರ್ಕ 14:1-11; ಯೋಹಾನ 12:1-8).-ಶುಕ್ರವಾರ ರಾತ್ರಿ ಯೇಸುವು ಬೇಥಾನ್ಯವನ್ನು ತಲುಪಿದ್ದನು. ಪಸ್ಕಹಬ್ಬಕ್ಕೆ ತಮ್ಮ ಮಾರ್ಗದಲ್ಲಿದ್ದ ಜನಸಮೂಹಕ್ಕೆ ಆತನು ಆಸಕ್ತಿಯ ಕೇಂದ್ರವಾಗಿದ್ದನು. ಅವರು ತಮ್ಮ ಪಟ್ಟಣದಲ್ಲಿಯ ತಮ್ಮ ಸ್ನೇಹಿತರ ಮನೆಗಳಲ್ಲಿ ಇರಲು, ಇಲ್ಲವೇ ಎಣ್ಣೆಮರಗಳ ಇಳುಕಲಿನಲ್ಲಿ ಮತ್ತು ಕಿದ್ರೋನ ಕೊಳ್ಳಲ್ಲಿ ಡೇರೆಗಳನ್ನು ಹಾಕಲು ದಾಟಿಹೋಗುತ್ತಿದ್ದಾಗ, ಆತನು ಚಿರಪರಿಚಿತವಾದ ಬೇಥಾನ್ಯದ ಮನೆಗೆ ಹೋದನು. ಯಾವಾಗಲೂ ಸ್ವಾಗತಿಸಲ್ಪಟ್ಟ ಅತಿಥಿಯಾದ ಆತನು ಈಗ ಮೂರನೆಯಸಲ ಸ್ವಾಗತಿಸಲ್ಪಟ್ಟನು. ಸಬ್ಬತ್ತು ವಿಶ್ರಾಂತಿಯಲ್ಲಿ ಕಳೆಯಲ್ಪಡುವುದು; ಆದರೆ ಆ ರಾತ್ರಿ ಕುಷ್ಠರೋಗಿಯಾಗಿದ್ದ ಸೀಮೋನನ ಮನೆಯಲ್ಲಿ ಆತನ ಗೌರವಕ್ಕಾಗಿ ಊಟವು ಏರ್ಪಡಿಸಲ್ಪಟ್ಟಿತ್ತು. ಮರಿಯಳು, ಮಾರ್ಥಳು ಮತ್ತು ಲಾಜರನು ಅಲ್ಲಿದ್ದರು, ಒಬ್ಬನ ಜೀವವು ಪುನಃ ಬಂದದ್ದಕ್ಕಾಗಿ ಆನಂದಿಸುತ್ತ, ಒಬ್ಬರಿಗೊಬ್ಬರ ಅನ್ಯೋನ್ಯತೆಯು ನವೀಕರಿಸಲ್ಪಟ್ಟಿದ್ದಕ್ಕಾಗಿ ಮತ್ತು ತಾವು ಬಹಳವಾಗಿ ಕೊಡಬೇಕಾಗಿದ್ದಾತನ ಸನ್ನಿಧಿಯಲ್ಲಿ ಅವರೆಲ್ಲರೂ ಹಾಜರಿದ್ದರು, ಸಾಮಾನ್ಯವಾದ ಮಾರ್ಗಗಳಲ್ಲಿ ಕೃತಜ್ಞತೆಯನ್ನು ವ್ಯಕ್ತಪಡಿಸಲಾಗದ ಒಬ್ಬರು ಅಲ್ಲಿದ್ದರು. ಕರ್ತನ ಮುಖವನ್ನು ದಿಟ್ಟಿಸಿ ನೋಡುತ್ತ, ಆತನ ಕೃಪಾಭರಿತ ಮಾತುಗಳನ್ನು ಆಲಿಸುತ್ತ ಆಕೆ ಇನ್ನು ಮುಂದೆ ಸಹಿಸಲಾರಳಾದಳು. ಆಕೆ ಎದ್ದಳು, ಮತ್ತು ಬಹು ಬೆಲೆಯುಳ್ಳ ಸುಗಂಧ ಭರಣಿಯನ್ನು ತೆಗೆದುಕೊಂಡು ಬಂದು, ಆತನ ತಲೆಯ ಮೇಲೆ ಹೊಯ್ದಳು, ಆ ಮೇಲೆ ಆತನು ಮೇಜಿಗೆ ಒರಗಿಕೊಂಡಿದ್ದಾಗ ಪಾದಗಳ ಮೇಲೆ ಹೊಯ್ದಳು. ಈಗಿರುವಂತೆ ಆಗಲೂ ಒರಟು ಜನರಿದ್ದರು. "ಹಾಳು ಮಾಡುವಿಕೆಯನ್ನು" ಟೀಕಿಸಿದರು; ಆದರೆ ಯೇಸುವಿಗೆ ಅದು ಪ್ರೀತಿಯನ್ನು ತೋರಿಸಿದ್ದು, ಅಮೂಲ್ಯವಾದ ಮೌಲ್ಯವುಳ್ಳದ್ದಾಗಿತ್ತು. "ಈಕೆಯನ್ನು ಬಿಡಿರಿ, ಈಕೆಗೆ ಯಾಕೆ ತೊಂದರೆಕೊಡುತ್ತೀರಿ? ಈಕೆ ನನಗೆ ಒಳ್ಳೇ ಕಾರ್ಯ ಮಾಡಿದ್ದಾಳೆ; ಈಕೆಯು ಮುಂದಾಗಿ ನನ್ನ ಉತ್ತರ ಕ್ರಿಯೆ ಗೋಸ್ಕರ ನನ್ನ ದೇಹಕ್ಕೆ ತೈಲವನ್ನು ಹಚ್ಚಿದ್ದಾಳೆ."[1]

**2. ಭಾನುವಾರ: ಜಯೋತ್ಸವದ ಪ್ರವೇಶ** (ಮತ್ತಾಯ 21:1-17).-ಪಸ್ಕಹಬ್ಬದ ವಾರದಲ್ಲಿ ಯೆರೂಸಲೇಮು ಪಲೆಸ್ತೀನನ ಎಲ್ಲಾ ಭಾಗಗಳಿಂದಲೂ ಸಾಮ್ರಾಜ್ಯದ ಎಲ್ಲಾ ಭಾಗಗಳಿಂದಲೂ ಬಂದ ಜನರ ಗುಂಪುಗಳಿಂದ ತುಂಬಿಕೊಂಡಿತ್ತು; ಅವರಲ್ಲಿ ಅನೇಕರು ಯೇಸುವಿನ ಬಗ್ಗೆ ಕೇಳಿದ್ದರು, ಪೆರೆಯದಲ್ಲಿಯ ಸೇವೆಯ ಪರಿಣಾಮವು ಮತ್ತು ಲಾಜರನನ್ನು ಎಬ್ಬಿಸಿದ್ದು ಒಂದು ಕಡೆಯಲ್ಲಿ ಪ್ರಸಿದ್ಧಿಯನ್ನು ಪ್ರಕಾಶಗೊಳಿಸುವದಕ್ಕೆ ಮತ್ತು ಇನ್ನೊಂದು ಕಡೆಯಲ್ಲಿ ತಿರಸ್ಕಾರದ ಬೆಂಕಿಯನ್ನು ಹಚ್ಚುವುದಾಗಿತ್ತು. ಅಂತ್ಯವು ಸಮೀಪವಾಗಿತ್ತು; ಆದುದರಿಂದ ತಿರಸ್ಕರಿಸಲಿಲ್ಲ, ಆದರೆ ಬಹಿರಂಗ ಮೆಸ್ಸಿಯಾನಿಕ್ ಪ್ರದರ್ಶನಕ್ಕೆ ಒಪ್ಪಿಸಿಕೊಟ್ಟನು. ಯುದ್ಧದ ಸಂಕೇತವಾದ ಕುದುರೆಯನ್ನು ಆರಿಸಿಕೊಳ್ಳುವುದರ ಬದಲು ಸಮಾಧಾನದ ಸಂಕೇತಾದ ಕತ್ತೆಮರಿಯನ್ನು ಆಯ್ದು ಕೊಳ್ಳುವದರಿಂದ ತನ್ನ ಆಳ್ವಿಕೆಯ ಸ್ವಭಾವವನ್ನು ತಿಳಸುತ್ತಾನೆ. ಎಣ್ಣೆಮರದ ಬೆಟ್ಟವನ್ನು ತಲುಪಿದಾಗ, ಪಟ್ಟಣದಿಂದ ಜನರ ಗುಂಪುಗಳು ಬೇಥಾನ್ಯದಿಂದ ಆತನೊಂದಗೆ ಬರುತ್ತಿದ್ದ ಜನರ

ಗುಂಪುಗಳನ್ನು ಸಂದರ್ಶಿಸಿದವು; ಮತ್ತು ಘೋಷಣೆಗಳಿಂದ ಹೊಸನ್ನಗಳಿಂದ ಮತ್ತು ಜಯಶಾಲೀ ಪ್ರದರ್ಶನಗಳಿಂದ ಆತನು ಯೆರೂಸಲೇಮಿಗೆ ಕರತರಲ್ಪಟ್ಟನು. ಇಡೀ ಪಟ್ಟಣದಲ್ಲಿ ಗದ್ದಲವಾಯಿತು, ಹೋರಾಟದ ಮನೋ ಉದ್ವೇಗಗಳಿಂದ ತುಂಬಿದ್ದವು. ಅದು ಕೇವಲ ಸ್ಥಳೀಯವಾದ ಪ್ರದರ್ಶನವಾಗಿತ್ತು; ಎಣ್ಣೆ ಮರಗಳ ಬೆಟ್ಟದ ಮೇಲಿನಿಂದ ಯೆರೂಸಲೇಮಿಗಾಗಿ ಆತನು ಕಣ್ಣೀರಿಟ್ಟಿದ್ದನು. ಅದು ತಣ್ಣಗಾಗಿ ಬೇರೆಯಾಗಿದ್ದ ಬಹಿರಂಗವಾಗಿ ಟೀಕಿಸಿತು. ಅದು ತನ್ನ ಕರ್ತನನ್ನು ಸ್ವೀಕರಿಸಿದ್ದರೆ ಏನಾಗುತ್ತಿತ್ತು? ಎಂದು ಒಬ್ಬನು ಕೇಳದೇ ಇರಲಾರನು, ನಾವು ಉತ್ತರಕೊಡಲಾರೆವು. ತಿರಸ್ಕರಿಸುವುದೇ ಅಂತಿಮವಾಗಿತ್ತೆಂದು ಮಾತ್ರ ನಾವು ಬಲ್ಲೆವು, ಆಸಕ್ತಿಯುಳ್ಳ ಶಿಷ್ಯರು ನಿರಾಶರಾಗಿದ್ದರಲ್ಲಿ ಸಂಶಯವಿಲ್ಲ; ಅವರು ನಿರೀಕ್ಷಿಸಿದಂತೆ ಯೇಸುವು ಮೆಸ್ಸಿಯಾನಿಕ್ ಪ್ರದರ್ಶನವನ್ನು ಮುಂದರಿಸಲಿಲ್ಲ; ದೇವಾಲಯದಲ್ಲಿ ಪ್ರತಿಯೊಂದರ ಪ್ರತೀಕ್ಷೆಮಾಡಿ, ಆತನು ರಾತ್ರಿಗಾಗಿ ಬೇಥಾನ್ಯಕ್ಕೆ ಹಿಂದಿರುಗಿದನು.

**3. ಸೋಮವಾರ: ಫಲವಿಲ್ಲದ ಅಂಜೂರದ ಮರ; ದೇವಾಲಯವನ್ನು ಎರಡನೆಯ ಸಲ ಶುದ್ಧೀಕರಿಸಿದ್ದು** (ಮತ್ತಾಯ 21:12, 13, 18, 19; ಮಾರ್ಕ 11:12-18).-ಪ್ರಾತಃಕಾಲದಲ್ಲಿ ಪಟ್ಟಣಕ್ಕೆ ಹೋಗುತ್ತಿದ್ದ ದಾರಿಯಲ್ಲಿ ಯೇಸುವು ಒಂದರಲ್ಲಿ ಅದ್ಭುತಕಾರ್ಯವೂ ಸಾಮ್ಯವೂ ಆಗಿರುವ ಅದ್ಭುತಕಾರ್ಯವನ್ನು ಮಾಡಿದನು. ಫಲವಿಲ್ಲದ ಅಂಜೂರದ ಮರವು, ತನ್ನ ಅಸಾಮಾನ್ಯವಾದ ಎಲೆಗಳೊಂದಿಗೆ, ಅಸಾಮಾನ್ಯವಾದ ಫಲಭರಿತತೆಯನ್ನು ಕೊಚ್ಚಿಕೊಂಡಿತು, ಯೇಸುವಿನಿಂದ ಒಂದು ಮಾತಿನೊಂದಿಗೆ ಅದು ನಾಶವಾಗಿ ಹೋಯಿತು: ಸುಳ್ಳು ಪಟ್ಟಣ ಮತ್ತು ಜನಾಂಗಕ್ಕೆ ಇಲ್ಲವೇ ಅದರ ಅಂತ್ಯ ನಾಶನವಾಗಿರುವ ಸುಳ್ಳು ಜೀವನಕ್ಕೆ ಯೋಗ್ಯವಾದ ಸಂಕೇತ. ದಾಟಿಹೋಗಿ ಯೇಸು ದೇವಾಲಯವನ್ನು ಪ್ರವೇಶಿಸಿದನು, ಭಾನುವಾರದ ಸಮೀಕ್ಷೆಗೆ ಫಲಿತಾಂಶದಂತೆ ಆತನು ತನ್ನ ಪ್ರಥಮ ಪಸ್ಕದ ಸಮಯದಲ್ಲಿ ಮಾಡಿದಂತೆ ಅದನ್ನು ಶುದ್ಧೀಕರಿಸಿದನು. ಒಂದು ಆಸಕ್ತಿಯುಳ್ಳ ಘಟನೆಯು ಯೋಹಾನನಿಂದ ಕಾಯ್ದಿರಿಸಲ್ಪಟ್ಟಿದೆ (12:20-33) ಅದು ಫಿಲಿಪ್ಪ ಮತ್ತು ಅಂದ್ರೆಯರು ಗ್ರೀಕ್ ಜನಾಂಗದ ಪ್ರತಿನಿಧಿಗಳನ್ನು ಯೇಸುವಿನ ಬಳಿಗೆ ಕರೆದುಕೊಂಡು ಬಂದದ್ದಾಗಿದೆ. ತಾನು ಶಿಲುಬೆಯ ಮೇಲೆ ಇಡಲ್ಪಟ್ಟಾಗ, ಆತನ ಬಳಿಗೆ ಎಲ್ಲಾ ಕುಲಗಳ ಜನರು ಎಳೆ ಯಲ್ಪಡುವರು ಎಂಬ ಸಮಯವನ್ನು ಆತನು ಮುನ್ನೋಡಿದನು. ಯಜ್ಞದಿಂದ ಆತನ ಪ್ರಾಣವು ಮುದುಡಿತು: ಆದರೆ, “ಗೋದಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವುದು.”[2] ಹೀಗೆ, ಕೊನೆಯವರೆಗೆ, ಯೇಸುವು ತನ್ನ ರಾಜ್ಯದ ಸ್ವಭಾವವನ್ನ ಮುಂದಿಡಲು ಪ್ರತಿಯೊಂದು ಸಂದರ್ಭವನ್ನು ಉಪಯೋಗಿಸಿಕೊಂಡನು. ಆತನು ಆಯ್ದುಕೊಂಡಿದ್ದರೆ, ಒಂದು ದಿನದಲ್ಲಿ, ಒಂದು ರಾಜಕೀಯ ಕ್ರಾಂತಿಯನ್ನು ರೂಪಿಸಿ[3] ಭೂಲೋಕದ ಸಾಮ್ರಾಜ್ಯವನ್ನು ಸ್ಥಾಪಿಸಬಹುದಿತ್ತು; ಆದರೆ ಆ ಪ್ರಶ್ನೆಯು ಬಹಳ ಸಮಯದ ಹಿಂದೆಯೇ ಬಗೆಹರಿಸಲ್ಪಟ್ಟಿತ್ತು. ಮನುಷ್ಯನ ಕಿರೀಟ ಮತ್ತು ತನ್ನ ಸ್ವಂತ ಕಿರೀಟ ಸಹ ಶಿಲುಬೆಯ ಮಾರ್ಗದಿಂದ ಬರಬೇಕಾಗಿದ್ದವು.

**4. ಮಂಗಳವಾರ: ಪ್ರಶ್ನೆಗಳ ದಿನ** (ಮತ್ತಾಯ 21:23-25:46).-ಈಗ ನಾವು ಯೇಸುವಿನ ಬಹಿರಂಗ ಸೇವೆಯ ಕೊನೆಯ ಹಾಗೂ ಅತೀ ದೊಡ್ಡದಾದ ದಿನಕ್ಕೆ ಬರುತ್ತೇವೆ. ಆತನನ್ನು ಜನರ ಮುಂದೆ ಅವಮಾನಪಡಿಸಲು ಪ್ರಶ್ನೆಗಳ ಸರಣಿಯೊಂದಿಗೆ ಅದು ದೇವಾಲಯದಲ್ಲಿ ತೆರೆಯುತ್ತದೆ: (1) ಸನ್ಹೆದ್ರಿನದಿಂದ ಒಂದು ಸಮಿತಿಯು ಆತನ ಅಧಿಕಾರದ ಬಗ್ಗೆ ಕೇಳುತ್ತದೆ; (2) ತೆರಿಗೆ ಕೊಡುವುದರ ಬಗ್ಗೆ ಫರಿಸಾಯರಿಂದ; (3) ಪುನರುತ್ಥಾನದ ಬಗ್ಗೆ ಸದ್ದುಕಾಯರಿಂದ; (4) ದೊಡ್ಡ ಆಜ್ಞೆಗಳ ಬಗ್ಗೆ ಪುನಃ ಫರಿಸಾಯರಿಂದ; (5) ಕ್ರಿಸ್ತನ ಬಗ್ಗೆ ಯೇಸುವಿನಿಂದ. ತನ್ನ ಸರಿಸಾಟಿಯಾದ ಉತ್ತರಗ

ಳನ್ನು ಮೂರನೆಯ ಸಾಮ್ಯಗಳ ಮಹಾ ಗುಂಪಿನ ಮೂರು ಸಾಮ್ಯಗಳಲ್ಲಿ ಹೆಣೆದನು. ಅಂದರೆ, ಇಬ್ಬರು ಮಕ್ಕಳು, ದುಷ್ಟ ಒಕ್ಕಲಿಗರು ಮತ್ತು ಅರಸನ ಮಗನ ಮದುವೆ. ಆ ಮೇಲೆ ತನ್ನ ವೈರಿಗಳ ಮೇಲೆ ತಿರುಗಿ, ಅವರ ಮೇಲೆ "ಜೀವನ ಪೂರ್ತಿ ಸಾಕಾಗುವಷ್ಟು" ಗದರಿಸುವಿಕೆಗಳನ್ನು ಸುರಿಸಿದನು. "ಅಯ್ಯೋ ಶಾಸ್ತ್ರಿಗಳೇ, ಫರಿಸಾಯರೇ, *ಕಪಟಿಗಳೇ*"[4] ಎಂದು ಬಲವಾದ ಏಳು ಸಿಡಿಲುಗಳು ಅವರ ಮೇಲೆ ಬಿದ್ದವು. ಅದು ಯೋಗ್ಯವಾಗಿತ್ತು; ಆದರೆ ಅದು ಮರಣಾಂತಿಕ ವಾಗಿತ್ತೆಂದು ಯೇಸುವು ತಿಳಿದಿದ್ದಿರ ಬೇಕು. ಆದುದರಿಂದ ಆತನು ಯಾವುದೇ ಕರುಣೆಯನ್ನು ನಿರೀಕ್ಷಿಸಿರಲಿಲ್ಲ. ಯೇಸುವು ಎಂದೆಂದಿಗೂ ದೇವಾಲಯವನ್ನು ಬಿಟ್ಟು ಹೋಗುವಂತೆ, ಕೊನೆಯ ಘಟನೆಯು, ವಿಧವೆಯ ಎರಡು ಕಾಸುಗಳ ಬಗ್ಗೆ ಮೆಚ್ಚಿಕೆ. ಮಹಾ ಗದರಿಸುವಿಕೆಯ ನಂತರ ಈ ಸುಂದರವಾದ ಘಟನೆಯು, ಹಿಮಬಂಡೆಯ ಎದೆಯಲ್ಲಿ ನೀಲಲೋಹಿತ ಬುಗ್ಗೆಯಂತಿರುವುದು.

ಹನ್ನೆರಡು ಜನರೊಂದಿಗೆ ಹೊರಟುಹೋಗಿ, ಆತನು ಪಟ್ಟಣದ ದೇವಾಲಯದ ಕಡೆಗೆ ಮುಖಮಾಡಿಕೊಂಡು ಎಣ್ಣೆಮರಗಳ ಬೆಟ್ಟದ ಇಳುಕಲಿನಲ್ಲಿ ಕುಳಿತು ಕೊಂಡನು. ಅಲ್ಲಿ, ದೇವಾಲಯದ ದೊಡ್ಡ ಕಲ್ಲುಗಳ ಮೇಲಿನ ಶಿಷ್ಯರ ಮಾತುಗಳಿಗೆ ಉತ್ತರವಾಗಿ, ಮತ್ತು ತನ್ನ ಎರಡನೆಯ ಬರೋಣದ ಬಗೆಗಿನ ಪ್ರಶ್ನೆಗೆ ಉತ್ತರವಾಗಿ, ಆತನು ಯೆರೂಸಲೇಮಿನ ನಾಶನದ ಬಗ್ಗೆ ಹಾಗೂ ತನ್ನ ಎರಡನೆಯ ಬರೋಣದ ಬಗ್ಗೆ ಉಪದೇಶವನ್ನು ಹೇಳಿದನು, ಅದೆಲ್ಲದರ ಪಾಠಗಳು, "ಎಚ್ಚರವಾಗಿರಿ; ಸಿದ್ಧರಾಗಿರ್ರಿ; ನಿಮ್ಮ ಅವಕಾಶಗಳನ್ನು ವಿಮೋಚಿಸಿಕೊಳ್ಳಿರಿ" ಎಂಬುದಾಗಿದ್ದವು, ಹತ್ತು ಮಂದಿ ಕನ್ಯೆಯರು ಮತ್ತು ತಲಾಂತುಗಳ ಸಾಮ್ಯಗಳಿಂದ ಇದನ್ನು ಒತ್ತಿಹೇಳಿದನು. ಅನಂತರ ಮತ್ತಾಯ 25ರಲ್ಲಿ ದಾಖಲೆಯದ ನ್ಯಾಯತೀರ್ವಿಕೆಯ ಗಂಭೀರವಾದ ಚಿತ್ರವು ಬರುತ್ತದೆ.

ಹೀಗೆ ಯೇಸುವಿನ ಬಹಿರಂಗ ಸೇವೆಯ ಅತೀದೊಡ್ಡ ದಿನವು ಅಂತ್ಯಕ್ಕೆ ಬರುತ್ತದೆ. ಅದು ಬೋಧನೆಯಿಂದಲೂ ಘಟನೆಯಿಂದಲೂ ವಿವಿಧತೆಯೊಂದಿಗೆ ತುಂಬಿಕೊಂಡಿತ್ತು, ಯೇಸು ತನ್ನ ಶಿಷ್ಯರೊಂದಿಗೆ ಕೆಲನಿಮಿಷ ನಡೆದ ನಂತರ, ಪುನಃ ಮತ್ತೊಮ್ಮೆ ಬೇಥಾನ್ಯದಲ್ಲಿ ವಿಶ್ರಾಂತಿ ಪಡೆದನು.

ಆದರೆ ಆತನ ವೈರಿಗಳು; ಅವರೊಂದಿಗೆ ದಿನವು ಹಾಗೆ ಮುಕ್ತಾಯಗೊಳ್ಳಲಿಲ್ಲ. ರಹಸ್ಯದಲ್ಲಿ ಅವರು, ಮೊದಲನೆಯದಾಗಿ, ಆತನು ಸಾಯಬೇಕು, ಎರಡನೆಯದಾಗಿ ಆತನು ಹಬ್ಬದ ಸಮಯದಲ್ಲಿ ಕೊಲ್ಲಲ್ಪಡಬಾರದು ಎಂದು ತೀರ್ಮಾನಿಸಿಕೊಂಡರು; ಯಾಕಂದರೆ, ಕಪಟಿಗಳಾದ ಅವರು ಹೇಡಿಗಳಾಗಿದ್ದು, ಸ್ನೇಹಪರನಾಗಿದ್ದ ಆತನ ಮೇಲೆ ಕೈಹಾಕಲು ಅವರು ಧೈರ್ಯಗೊಳ್ಳಲಿಲ್ಲ.[5]

ಮತ್ತು ಈಗ ನಾವು ಚರಿತ್ರೆಯಲ್ಲಿಯ ಒಂದು ಗೂಢವಾದ ಪ್ರಶ್ನೆಗೆ ಬರುತ್ತೇವೆ. ಕಾಲಕ್ಕೆ ತಕ್ಕಂತೆ ಆ ಸಮಯದಲ್ಲಿ ಹನ್ನೆರಡು ಜನರಲ್ಲಿ ಒಬ್ಬನಾದ ಯೂದನು ಬರುತ್ತಾನೆ. ಅವನು ಆತನು ಎಲ್ಲಿಗೆ ಹೋಗುತ್ತಿದ್ದನು, ಎಲ್ಲಿ ಉಳಿದುಕೊಳ್ಳುತ್ತಿದ್ದನು ಎಂಬುದನ್ನು ಅವನು ತಿಳಿದವನಾಗಿದ್ದನು. ತನ್ನ ಒಡೆಯನನ್ನು ಹಣಕ್ಕಾಗಿ ಹಿಡಿದು ಕೊಡಲು ಮುಂದೆ ಬಂದನು. ಹಣದಾಶೆಯ ಕಾರಣವಾಗಿತ್ತೆಂದು ವೃತ್ತಾಂತಗಳು ಸ್ಪಷ್ಟವಾಗಿ ತೋರಿಸುತ್ತವೆ (ಮತ್ತಾಯ 26:14, 15; ಮಾರ್ಕ 14:10, 11; ಲೂಕ 22:3-5; ಹೋಲಿಸು ಯೋಹಾನ 12:4-6). ಪ್ರೀತಿಯ ಅರ್ಪಣೆಯನ್ನು ತಪ್ಪಾಗಿ ಕಂಡವನು. ಮೂವತ್ತು ಬೆಳ್ಳಿ ನಾಣ್ಯಗಳಿಗೆ ತನ್ನ ಒಡೆಯನನ್ನು ಮಾರಿದನು. ಇದು ಮರಿಯಳ ಕೃತಜ್ಞತಾ ಅರ್ಪಣೆಯ ಬೆಲೆಯ ಮೂರನೆಯ ಭಾಗವಾಗಿತ್ತು.

**5. ಬುಧವಾರ: ಬಿರುಗಾಳಿಗಿಂತ ಮೊದಲು ಶಾಂತತೆ.**-ಬುಧವಾರದ ಘಟನೆಗಳ ಬಗ್ಗೆ ಯಾವ ದಾಖಲೆಗಳೂ ಇಲ್ಲದಿರುವಂತೆ ಕಾಣುತ್ತದೆ. ಅದರ ದೃಶ್ಯಗಳನ್ನು ಕಲ್ಪಿಸುವುದರಲ್ಲಿ ನಾವು

ಬಿಡಲ್ಪಟ್ಟಿದ್ದೇವೆ.-ಇಡೀ ಪಟ್ಟಣವು ಗಮನಿಸುತ್ತಿತ್ತು, ಆತನು ದೇವಾಲಯಕ್ಕೆ ಯಾಕೆ ಹಿಂದಿರುಗಿ ಬರಲಿಲ್ಲ ಎಂದು ಆಶ್ಚರ್ಯ ಪಡುತ್ತಿತ್ತು; ಆತನ ವಾಕ್ಯ ಕೇಳಲು ಜನರು ಹಸಿವೆಯಿಂದ ಇದ್ದರು, ಅಧಿಕಾರಿಗಳು ಆತನ ರಕ್ತಕ್ಕಾಗಿ ಬಾಯಾರಿಕೆಯಿಂದ ಇದ್ದರು. ಆದರೆ ಆತನ ಕಾರ್ಯವು ಮಾಡಲ್ಪಟ್ಟಿತು. ಆತನು ತನ್ನ ಶಿಷ್ಯರೊಂದಿಗೆ ಬೇಥಾನ್ಯದಲ್ಲಿ ಪ್ರತ್ಯೇಕವಾಗಿ ಮಾತಾಡಿದ್ದಿರ ಬಹುದು; ಬಹುಶಃ ಆತನು ಅಂತಿಮ ದೃಶ್ಯಗಳಿಗಾಗಿ ವಿಶ್ರಾಂತಿಯಲ್ಲಿ, ಪ್ರಾರ್ಥನಾ ಪೂರ್ವಕವಾಗಿ ದಿನವನ್ನು ಕಳೆದಿರಬಹುದು. ಅದು ನಮಗೆ ತಿಳಿದಿರುವುದಿಲ್ಲ. ರಹಸ್ಯದ ಪರದೆಯು ಆ ದಿನದ ಮೇಲೆ ಮುಚ್ಚಿತ್ತು. "ಆ ರಾತ್ರಿ ಭೂಮಿಯ ಮೇಲೆ ಆತನು ಮಲಗಿಕೊಂಡನು. ಗುರುವಾರ ಪ್ರಾತಃಕಾಲ ಮತ್ತೊಮ್ಮೆ ಎಂದೂ ನಿದ್ರೆಹೋಗದಂತೆ ಎಚ್ಚತ್ತುಕೊಂಡನು."

**6. ಗುರುವಾರ: ಕೊನೆಯ ಭೋಜನ** (ಮತ್ತಾಯ 26:17-35; ಯೋಹಾನ 13:1-17). -ಗುರುವಾರ ಒಂದು ಸಮಯದಲ್ಲಿ ತನ್ನ ಇಬ್ಬರು ಶಿಷ್ಯರನ್ನು ಪಸ್ಕಕ್ಕಾಗಿ ಸಿದ್ಧಪಡಿಸಲು ತನ್ನ ಇಬ್ಬರು ಶಿಷ್ಯರನ್ನು ಪಟ್ಟಣದೊಳಗೆ ಕಳುಹಿಸಿದನು. ರಾತ್ರಿಯಲ್ಲಿ ಮತ್ತೊಂದು ಸಲ ತನ್ನ ಹನ್ನೆರಡು ಜನರೊಂದಿಗೆ ಮೇಜಿನ ಬಳಿ ಕುಳಿತುಕೊಂಡನು; ಯಾಕಂದರೆ ಯೂದನು ಇನ್ನೂ ಅಲ್ಲಿದ್ದನು - ಕಾಣಿಸುವಿಕೆಯಲ್ಲಿ, ಒಬ್ಬ ಶಿಷ್ಯನು; ಹೃದಯದಲ್ಲಿ ದ್ರೋಹಿಯು ಮತ್ತು ಗೂಢಚಾರನು. ಉನ್ನತ ಸ್ಥಾನದ ಚರ್ಚೆಯಿಂದ ತಮ್ಮ ಸ್ಥಳದಲ್ಲಿ ಕೂತು ಕೊಳ್ಳುತ್ತಿರುವಾಗ ಈ ಚಿಕ್ಕ ಗುಂಪಿನ ಮೇಲೆ ಮೋಡ ಕವಿದಿತ್ತು. ಆ ಸುಂದರವಾದ ರೀತಿಯಲ್ಲಿ, ಅಷ್ಟು ಯೋಗ್ಯವಾದದ್ದರಲ್ಲಿ ಆದಾಗ್ಯೂ ಕಠಿಣವಾದ ಅನುಕರಣೆಯಲ್ಲಿ, ಯೇಸುವು ಅವರ ಮಹತ್ವಾಕಾಂಕ್ಷೆಯನ್ನು ಗದರಿಸಿದನು. ಆಸನದಿಂದ ಎದ್ದು ಬಂದು, ಸಾಮಾನ್ಯ ಸೇವಕನಂತೆ ಅವರ ಪಾದಗಳನ್ನು ತೊಳೆಯಲು ಮುಂದರಿದನು; ಆಗ ಗಲಿಬಿಲಿಗೊಂಡ ಶಿಷ್ಯರ ಕಡೆಗೆ ತಿರುಗಿ ಕೊಂಡು ದೀನತೆಯ ಮತ್ತು ಸೇವೆಯ ಪಾಠವನ್ನು ತೋರಿಸಿದನು. "ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡಿದು ಕೊಡುವನು"[6] ಎಂದು ಯೇಸುವು ಹೇಳುತ್ತ ಹೋದಂತೆ ಮೋಡಗಳು ಇನ್ನೂ ಕಪ್ಪಾಗುತ್ತ ಹೋದವು. ಯೂದನು ಬೇಗನೇ ಹೊರಗೆ ಹೋದನು - ಯಾವುದೋ ಸ್ನೇಹದ ಸೇವೆಗಾಗಿ ಹೋದ ನೆಂದು ಶಿಷ್ಯರು ತಿಳಿದರು; ಯೇಸುವು ತಿಳಿದಿದ್ದಂತೆ ಅವನು ತನ್ನ ಕತ್ತಲೆಯ ಯೋಜನೆ ಯನ್ನು ಕಾರ್ಯರೂಪಕ್ಕೆ ತರಲು ಹೋದನು. ಆಮೇಲೆ ಯೇಸು ಎಲ್ಲರೂ ತನ್ನನ್ನು ತ್ಯಜಿಸಿ ಹೋಗುವರು ಎಂಬುದನ್ನು ಪ್ರಕಟಿಸಿದನು. ಸ್ವಭರವಸೆಯುಳ್ಳ ಪೇತ್ರನಿಂದ ಅಲ್ಲಗಳೆಯಲ್ಪಡುವೆನೆಂಬುದನ್ನು ತಿಳಿಸಿದನು. ಆಗ ಮೋಡವು ಮೇಲಕ್ಕೆತ್ತಲ್ಪಟ್ಟಿತ್ತು ಮತ್ತು ಯೇಸುವು ಸುಂದರವಾದ ಸ್ಮಾರಕ ಭೋಜನವನ್ನು ಸ್ಥಾಪಿಸಿದನು ಹಾಗೂ ಯೋಹಾನ 14-16ರಲ್ಲಿ ದಾಖಲೆಯಾದ ಸರಿಗಟ್ಟದ ಉಪದೇಶವನ್ನು ಪ್ರಾರಂಭಿಸಿದನು. ನಿಜವಾದ ಕರ್ತನ ಭೋಜನದೊಂದಿಗೆ ಸಂಭಾಷಣೆಯನ್ನು ಮುಕ್ತಾಯಗೊಳಿಸಿದನು (ಯೋಹಾನ 17); ಆತನ ತಕ್ಷಣದ ಶಿಷ್ಯರ ಗುಂಪನ್ನು ವಿಸ್ತರಿಸಿ, ಅವರ ವಾಕ್ಯದ ಮುಖಾಂತರ ಆತನ ಮೇಲೆ ನಂಬಿಕೆಯನ್ನು ಇಡುವವರನ್ನೊಳಗೊಂಡು ಇಡೀ ಜಗತ್ತಿಗಾಗಿ ಒಂದು ಪ್ರಾರ್ಥನೆ. ಹೀಗೆ, ಮೃದುವಾದ ಚರ್ಚೆಯಲ್ಲಿ ಮತ್ತು ಲೋಕವನ್ನು ಅಪ್ಪಿಕೊಂಡ ಪ್ರಾರ್ಥನೆಯಲ್ಲಿ ಮಧ್ಯರಾತ್ರಿಯವರೆಗೂ ದಿನವು ಕಳೆಯಲ್ಪಟ್ಟಿತು. ಕೋಣೆಯಿಂದ ಹೊರಗೆಬಂದು ಚಂದ್ರನ ಬೆಳಕಿನಲ್ಲಿ, ಯೇಸುವು ಪಟ್ಟಣವನ್ನು ಹಿಂದೆಬಿಟ್ಟು, ಬೇಥಾನ್ಯದ ದಿಕ್ಕಿನಕಡೆ ತನ್ನ ಶಿಷ್ಯರೊಂದಿಗೆ ನಡೆದುಹೋದನು.

7. **ಗೆತ್ಸೇಮನೆ** (ಮತ್ತಾಯ 26:36-46).-ಕಿದ್ರೋನ ಎಂದು ಕರೆಯಲ್ಪಡುವ ಕಣಿವೆಯ ಪೂರ್ವ ಅಂಚಿನಲ್ಲಿ, ಎಣ್ಣೆಮರಗಳ ಬೆಟ್ಟದ ಅಡಿಯಲ್ಲಿ, ಗೆತ್ಸೇಮನೆ (ಎಣ್ಣೆ ತೆಗೆಯುವ ಗಾಣ) ಎಂದು ಕರೆಯಲ್ಪಟ್ಟ ಪ್ರಸಿದ್ಧ ತೋಟವಿತ್ತು. ಎಣ್ಣೆಮರಗಳ

ನೆರಳಿನಲ್ಲಿ ಪ್ರವೇಶಿಸಿ, ಮೂವರನ್ನು ಹೊರತು ಪಡಿಸಿ ಉಳಿದವರನ್ನು ಅಲ್ಲಿಬಿಟ್ಟು, ಪ್ರಾರ್ಥನೆಗಾಗಿ ತೋಟದಲ್ಲಿ ಮುಂದೆ ಹೋಗಿ, ತೀವ್ರ ವೇದನೆಯಲ್ಲಿ ಪ್ರಾರ್ಥನೆಯಲ್ಲಿ ನಿರತನಾದನು, "ಬೆಚ್ಚಿ ಬೆರಗಾದನು"[7]; "ದುಃಖಕ್ಕೆ ಒಳಗಾದನು"[8]; "ಸಾಯುವಷ್ಟು ದುಖಕ್ಕೆ ಒಳಗಾದನು"[9]; "ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋ ಪಾದಿಯಲ್ಲಿತ್ತು"[10] ಮೂರು ಸಲ ಆತನ ತುಟಿಗಳಿಂದ ಒಪ್ಪಿಸಿಕೊಡುವಿಕೆಯ ಕೂಗು ಮೇಲಕ್ಕೆ ಹೋಯಿತು: "ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋ ಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ."[11] ಮೂರು ಸಲ ಆತನು ಆ ಮೂವರ ಬಳಿಗೆ ಹಿಂದಿರುಗಿ ಅವರು ನಿದ್ರಿಸುವುದನ್ನು ಕಂಡನು. ಇದೆಲ್ಲದರ ಅರ್ಥವೇನು? ದೈಹಿಕ ಮರಣವು ಭಯವು ಆತನ ಮುಖದಿಂದ ರಕ್ತದ ಬೆವರು ಬರುವಂತೆ ಮಾಡಿತೋ ಮತ್ತು ತನ್ನ ತುಟಿಗಳಿಂದ ವೇದನೆಯಿಂದ ಕೂಗುವಂತೆ ಮಾಡಿತೋ? ಹಾಗಿದ್ದರೆ ಅನೇಕ ಸ್ಪಾರ್ಟನ್ ಯುದ್ಧವೀರರ ಶೂರತ್ವಕ್ಕಿಂತ ಆತನು ಕಡಿಮೆಯಾಗಿದ್ದನೋ ಅಥವಾ ಗಲ್ಲುಗಂಬದ ಮೇಲಿನ ಕ್ರೂರ ಅಪರಾಧಿಗಳಿಗಿದ್ದ ದೈಹಿಕ ಧೈರ್ಯ ಕಡಿಮೆಯುಳ್ಳವನಾಗಿದ್ದನೋ? ಇಲ್ಲಿಯ ವರೆಗೆ ನಾವು ಅನುಸರಿಸಿದ ಮಾನವತೆಯು ಕೊನೆಗೆ ಕರುಣೆಪಡುವ ಮಟ್ಟಕ್ಕೆ ಉಡುಗಿ ಹೋಯಿತೋ? ಇದೆಲ್ಲದಕ್ಕೂ ಹೆಚ್ಚು ಉದಾತ್ತವಾದ ಅರ್ಥವಿರುವುದಲ್ಲವೋ? ಆತನನ್ನು ಭೂಮಿಗೆ ಜಜ್ಜುತ್ತಿರುವುದು ಹೆಚ್ಚು ಬಲವಾದ ದುಃಖವಾಗಿರುವದಿಲ್ಲವೋ - ಲೋಕದ ಪಾಪಗಳ ಮತ್ತು ದುಃಖಗಳ ಮಿತಿಯಿಲ್ಲದ ಭಾರವಾಗಿರುವದಿಲ್ಲವೋ? ತಣ್ಣಗಾದ ಊಹೆಗೆ ದೃಶ್ಯವು ಅತಿಯಾಗಿ ಪರಿಶುದ್ಧವಾದದ್ದಾಗಿದೆ. ಇದರ ಮೂಲಕವಾಗಿ, ಆತನ ಉದ್ದೇಶದ ಮೇಲೆ ಹಿಂದಿನ ದಾಳಿಗಳಂತೆ, ಆತನು ಜಯಶಾಲಿಯಾದನೆಂದು ಮಾತ್ರ ನಾವು ಬಲ್ಲವರಾಗಿದ್ದೇವೆ: "ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು" (ಇಬ್ರಿಯ 5:7); "ಪರಲೋಕದಿಂದ ಬಂದ ಒಬ್ಬ ದೇವದೂತನು ಆತನಿಗೆ ಕಾಣಿಸಿಕೊಂಡು ಆತನನ್ನು ಬಲಪಡಿಸಿದನು" (ಲೂಕ 22:43).

---

ಟಿಪ್ಪಣಿಗಳು

[1]ಮಾರ್ಕ 14:6-8. ಈ ಅಭಿಷೇಕವನ್ನು ಲೂಕ 7ರಲ್ಲಿಯದರೊಂದಿಗೆ ಗಲಿಬಿಲಿ ಪಡಿಸಬಾರದು. ಅದು ಮೊದಲಿನದಾಗಿತ್ತು, ಇದು ಯೇಸುವಿನ ಸೇವೆಯಲ್ಲಿ ತಡವಾಗಿ ಬಂದದ್ದಾಗಿದೆ; ಅದು ಕುಷ್ಠರೋಗಿಯಾಗಿದ್ದ ಸೀಮೋನನ ಮನೆಯಲ್ಲಿ ಆಯಿತು. ಅದು, ದುರಾ ಚಾರಿಯಾದ ಸ್ತ್ರೀಯಿಂದ ಆದದ್ದು, ಇದು, ಆತ್ಮಿಕ ಪ್ರಾಣವುಳ್ಳ ಮರಿಯಳಿಂದ ಆದದ್ದು; ಅದರಲ್ಲಿ, ಸೀಮೋನನು ಮಹಿಳೆಯ ಗುಣದ ನಿಮಿತ್ತ ಸೀಮೋನನು ತಪ್ಪನ್ನು ಕಂಡುಕೊಂಡನು, ಇದರಲ್ಲಿ, ಯೂದನು ವ್ಯರ್ಥವಾಗಿ ಹಾಳುಮಾಡಿದ್ದರಲ್ಲಿ ತಪ್ಪನ್ನು ಕಂಡು ಕೊಳ್ಳುತ್ತಾನೆ. [2]ಯೋಹಾನ 12:24. [3]ಡೀನ್ ಅವರು "wrought" ಎಂದಿದ್ದಾರೆ. [4]ಮತ್ತಾಯ 23:13, 14, 15, 23, 25, 27, 29. [5]ಡೀನ್ ಅವರು "durst" ಎಂದಿದ್ದಾರೆ. [6]ಮತ್ತಾಯ 26:21; ಮಾರ್ಕ 14:18; ಲೂಕ 22:21; ಯೋಹಾನ 13:21. [7]ಮಾರ್ಕ 14:33; ನೋಡಿರಿ ಮತ್ತಾಯ 26:37. [8]ಮಾರ್ಕ 14:33; ನೋಡಿರಿ ಮತ್ತಾಯ 26:37. [9]ಮತ್ತಾಯ 26:38; ಮಾರ್ಕ 14:34. [10]ಲೂಕ 22:44.

[11]ಮತ್ತಾಯ 26:39, 42, 44; ನೋಡಿರಿ ಮಾರ್ಕ 14:36, 39, 41; ಲೂಕ 22:42-46.

© 2009 Truth for Today